
ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
ಸರಿಯಾಗಿ ಓದಲು, ಬರೆಯಲು ಬಾರದ ಕೆಲವು ರಾಜಕಾರಣಿಗಳು ಪುಸ್ತಕ, ಅಂಕಣ ಬರೆಯಲೆಂತು ಸಾಧ್ಯ?



ಬರವಣಿಗೆ ಮಾರಿಕೊಳ್ಳುವ 'ಬೆಲೆಪೆನ್ನು'ಗಳು ಇರುತ್ತಾರಂತೆ!

ಸುಶೀಲಾ ಎನ್. ಪಾಟೀಲ, ಬೆಳಗಾವಿ
ಹಬ್ಬಗಳಲ್ಲಿ ಹೂಗಳನ್ನು ದೇವರಿಗೇರಿಸಿ ಮರುದಿನ ಕಸದ ಬುಟ್ಟಿಗೆ ಹಾಕುತ್ತೇವೆ. ಮರುಬಳಕೆ ಸಾಧ್ಯವೆ?
ದೇಗುಲದೆದುರಿನ ಬೊಕೆ ಮಾರಾಟಗಾರ ಆಗಲೇ ಮರುಬಳಕೆ ಮಾಡುತ್ತಿರುವನಂತೆ.

ಬಿ. ಬಸವರಾಜ್, ಹರಿಹರ
ರಾಜಕಾರಣಿ; ಇದು ಯಾವ ಲಿಂಗ?
ಭ್ರಷ್ಟಲಿಂಗ.

ಕೆ.ವಿ. ಗೋವಿಂದಾಚಾರಿ, ಮೈಸೂರು
18 ವರ್ಷದೊಳಗಿನವರಿಗೆ ಧೂಮಪಾನ, ಮದ್ಯಪಾನ ನಿಷೇಧಿಸಿರುವಂತೆ ಮೊಬೈಲ್ ಬಳಕೆಯನ್ನೂ ನಿಷೇಧಿಸಿದರೆ?




ಮಾತಾಪಿತೃಗಳು ಧರಣಿ ಹೂಡುತ್ತಾರೆ. ಬಿಡುವಿಲ್ಲದ ಬದುಕಲ್ಲಿ ಮೊಬೈಲ್ ಶಿಶುರಂಪ ನಿಯಂತ್ರಕ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಗುರುಗಳೆ, ಸಮಯವು ನಮ್ಮ ಕೈಯಲ್ಲೇನಾದರೂ ಇದ್ದಿದ್ದರೆ?
ಯಯಾತಿಯು ಅಂದೇ ಕಾಲವನ್ನು ನಿಲ್ಲಿಸಿ ಚಿರಯುವಕನಾಗುತ್ತಿದ್ದ.

ಎಂ.ಎ. ಕುಮಾರ್, ಬೆಂಗಳೂರು
ಮದುವೆಯ ನಂತರ ಮಾತು ಹೆಚ್ಚಾಗುವುದು ಯಾರಿಗೆ?
ಆ ಜೋಡಿಯ ಬಗ್ಗೆ ಆಡಿಕೊಳ್ಳುವವರಿಗೆ.

ಶ್ರುತಿ ರಿಗ್ರೆಟ್ ಐಯ್ಯರ್, ಅಮೆರಿಕ
ಹಿರಿಯರೇಕೆ ಕೆಲವು ವೇಳೆ ಒಬ್ಬರೇ ಮಾತನಾಡಿಕೊಳ್ಳುತ್ತಾರೆ?
ಅನ್ಯರು ಹೇಗೂ ಇವರ ಮಾತು ಕೇಳಿಸಿಕೊಳ್ಳರೆಂದು ಅರಿವಾದ್ದರಿಂದ ಈ ವರ್ಬಲ್ ಸೆಲ್ಫಿ!

ಬಿ. ಚಂದ್ರೇಗೌಡ, ಬೆಂಗಳೂರು
ಸ್ತ್ರೀಯನ್ನು 'ಮಾತೆ' ಎಂದು ಕರೆಯುವುದೇಕೆ?
ಅದು 'ಮಾತ್ರೆ' ಎಂಬುದರ ಅಪಭ್ರಂಶ. ಗಂಡಿನ ಲವಲವಿಕೆಯ ವೃದ್ಧಿಗೆ ಹೆಣ್ಣೇ ಮಾತ್ರೆ.

ಅಮರಯ್ಯಾ ಪತ್ರಿಮಠ, ಸುರಪುರ
ನಿಜ ಯಾವುದು? ಭ್ರಮೆ ಯಾವುದು?
ಕನ್ನಡ ವಾಹಿನಿಗಳು ಇರುವುದು ನಿಜ. ಅವುಗಳಲ್ಲಿ ಸರಿಗನ್ನಡ ಇದೆ ಎಂಬುದು ಭ್ರಮೆ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಸ್ವಿಗ್ಗಿ, ಜೊಮಾಟೊ ಊಟಕ್ಕೂ, ತಾಯಿಯ ಕೈತುತ್ತಿಗೂ ಏನು ವ್ಯತ್ಯಾಸ?
ಕೊರಳಿನ ಕರೆಗೆ ಓಗೊಡಲು ಅದು, ಕರುಳಿನ ಕರೆಗೆ ಓಗೊಡಲು ಇದು.

ಪಿ.ಜೆ. ರಾಘವೇಂದ್ರ, ಮೈಸೂರು
ರಾಜಕಾರಣಿಗಳನ್ನು ಶಂಕಿತ ಭ್ರಷ್ಟರು ಎಂದು ಕರೆಯುವುದಿಲ್ಲವೇಕೆ?
ಅವರ ಭ್ರಷ್ಟತೆಯ ಬಗ್ಗೆ ಇನಿತೂ ಶಂಕೆ ಇಲ್ಲದಿರುವುದರಿಂದ.

ಕಾಳೀಹುಂಡಿ ಶಿವಕುಮಾರ್, ಮೈಸೂರು
ಉತ್ತರಿಸಲು ಬಂದಾಗಿನಿಂದ ನಿಮ್ಮ ಕನಸಲ್ಲಿ ಕಾಡಿದ ಪ್ರಶ್ನೆಗಳು, ಉತ್ತರಗಳು ಯಾವುವು?
ಯಾವುವೂ ಇಲ್ಲ. ನನ್ನದು ಕುಂಭಕರ್ಣ ನಿದ್ರೆ.

ರಮೇಶ್ ಜಿ. ಬೊಂಗಾಳೆ, ಬೈಲಹೊಂಗಲ
ನ್ಯಾಯಕ್ಕೆ ಕಣ್ಣಿಲ್ಲ ಎನ್ನುತ್ತಾರೆ. ಪ್ರೀತಿಗೆ?
ಎಷ್ಟೋ ಬಾರಿ ತಲೆಯೇ ಇಲ್ಲ.

ಬಿ.ಆರ್. ಉಷಾ, ರಷ್ಯಾ
ನಮ್ದೇಶ ನೋಡದೆ ವಿದೇಶ ನೋಡೋರಿಗೆ ನಿಮ್ಮ ಸಲಹೆ?
ದೇಶ ಮುಖ್ಯವಲ್ಲ, ಉದ್ದೇಶ ಮುಖ್ಯ. ಅಲ್ಲಿ ಗ್ರಹಿಸಿದ್ದನ್ನು ಇಲ್ಲಿ ಅನುಸರಿಸಿದರೆ ಚೆನ್ನ.

## ಬಹುಮಾನಿತ ಪ್ರಶ್ನೆ

ಜ್ಯೋತಿ ಉಮೇಶ್, ಮೈಸೂರು
ಚಿಲ್ರೆ ಇಲ್ಲವೆಂದು ಚಾಕ್ಲೇಟ್ ಕೊಡುವವರು ಅದೇ ಚಾಕ್ಲೇಟನ್ನು ನಮ್ಮಿಂದ ಹಣವಾಗಿ ಪಡೆಯುವ ಕಾನೂನಿದೆಯೆ?
ಕೇಸ್ ಜಡಿದರೆ ಜಯ ನಮ್ಮದೇ. ಆದರೆ ಅವನ ಚಿಲ್ರೆ ಬುದ್ಧಿ ನಮ್ಮಲ್ಲಿಲ್ಲವಲ್ಲ!

ಪಿ. ಜಯವಂತ ಪೈ, ಕುಂದಾಪುರ
ಹುಬ್ಬಳ್ಳಿಯ ಆಸ್ಪತ್ರೆಯೊಂದರಲ್ಲಿ 14 ದಿನದ ಕಂದನ ಹೊಟ್ಟೆಯಿಂದ ಮತ್ತೊಬ್ಬ ಕಂದ ಹೊರಬಿದ್ದನಂತಲ್ಲ?
ಇದನ್ನು ಕೇಳಿ ಭಾಷಾತಜ್ಞರು ಖುಷಿಯಾಗಿದ್ದಾರೆ; 'ಕಂದಮ್ಮ' ಪದಕ್ಕೆ ಹೊಸ ಅರ್ಥ ದೊರಕಿತಲ್ಲ!

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಹಣ ತೊಳೆಯಲು ನೀರು ಬೇಕು. ಹಣೆಬರಹ ತೊಳೆಯಲು?



ನೀರೆ ಸಾಕು.

ಶ್ರೀಕಂಠೇಶ್ವರ ಎಸ್.
ಸತಿಗೆ ಷೇರುಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿಸಿದೆ. ಷೇರು ಮೌಲ್ಯ ಕುಸಿದಿದೆ. ಏರುವುದು ಯಾವಾಗ ಎನ್ನುತ್ತಿರುವಳಲ್ಲ?
ಅದು ಎಂದಾದರೂ ಏರೀತು. ಸತಿಯ ದೃಷ್ಟಿಯಲ್ಲಿ ಕುಸಿದ ನಿಮ್ಮ ಮೌಲ್ಯ ಏರದು!

ಎಸ್.ಸಿ. ರಮೇಶ್, ಮೈಸೂರು
ಅಂದು ಒಬ್ಬ ಬಸವಣ್ಣನ ಮಾತನ್ನು ಎಲ್ಲರೂ ಕೇಳಿದರು. ಈಗ ಬೀದಿಗೊಬ್ಬ ಬಸವ ಬಂದು ಸಮಾಜದ ಸ್ವಾಸ್ಥ್ಯ ಕದಡುತ್ತಿರುವರಲ್ಲಾ?
ನಿಮ್ಮಲ್ಲೇ ಉತ್ತರವಿದೆಯಲ್ಲ! ಆತ ಬಸವಣ್ಣ, ಇವರು ಬೀದಿ ಬಸವರು.

ಕೆ.ಎಸ್. ಸೋಮೇಶ್ವರ
ಆಂಗ್ಲ ಪದಗಳಲ್ಲಿ ಕೆಲವು ಅಕ್ಷರಗಳು ಮೌನವಾಗಿರಲು ಕಾರಣವೇನು?
ಸಹವಾಸ ಸರಿಯಿಲ್ಲದಾಗ ಮೌನ ವಹಿಸುವುದು ಸಭ್ಯತೆಯ ಲಕ್ಷಣ.

■ ರಾಮ್